ಬೆನ್ನು ತಟ್ಟಿ, 'ಈ ಹೋರಾಟದ ಕೆಚ್ಚೇ ನೋಡಿ ತಾಯ್ನಾಡನ್ನು ಉಳಿಸೋದು. ಆದರೆ ಹೋರಾಟ ಅನ್ನೋದು ನಮ್ಮ ಹಕ್ಕೊತ್ತಾಯವೇ ಹೊರತು ಯಾರೊಂದಿಗೂ ಸಂಘರ್ಷವಲ್ಲ' ಎಂದಿದ್ದರು. ಅವರು ಆಗ ಹೇಳಿದ ವಿವೇಕವನ್ನು ನಾಯಕರು ಯಾವತ್ತೂ ಮರೆಯಲಿಲ್ಲ. ಗೋಕಾಕ್ ಚಳುವಳಿಯಲ್ಲಿ ಭಾಗವಹಿಸುವಂತೆ ಚಂದ್ರಶೇಖರ ಪಾಟೀಲರು ರಾಜಣ್ಣನಿಗೆ ಬಹಿರಂಗ ಕರೆ ನೀಡುವ ಮುಂಚೆಯೇ ನಾಯಕರು ರಾಜಣ್ಣನನ್ನು ಭೇಟಿಯಾಗಿ ಅವರು ಹೋರಾಟಕ್ಕಿಳಿದರೆ ಚಳವಳಿಗೆ ಎಂತಹ ಹುಮ್ಮಸ್ಸು ಬರುತ್ತದೆ ಎನ್ನುವುದನ್ನು ಅವರಿಗೆ ಮನವರಿಕೆ ಮಾಡಿದ್ದರು. ಮೈಸೂರು ಬ್ಯಾಂಕಿನ ಸರ್ಕಲ್ಲಿನಿಂದ ವಿಧಾನಸೌಧದ ಕಡೆಗೆ ಸಾಗುತ್ತ ಸಾಗರದಂತೆ ಕಾಣುತ್ತಿದ್ದ ಜನರ ನಡುವೆ ರಾಜಣ್ಣನವರು ನಾಯಕರ ಭುಜದ ಮೇಲೆ ಕೈ ಹಾಕಿ ನಡೆಯುತ್ತಿದ್ದರೆ ನಾಯಕರ ಕಣ್ಣಿನಲ್ಲಿ ಹೆಮ್ಮೆಯ ಪ್ರವಾಹ ಹರಿಯುತ್ತಿತ್ತು. ಆಮೇಲಾಮೇಲೆ ನಡಿಗೆಯಲ್ಲಿ ಸಾಗುವ ಜನ ರಾಜಣ್ಣನನ್ನು ಮುತ್ತಿಕೊಳ್ಳುತ್ತ ಮೆರವಣಿಗೆಗೆ ತೊಡಕಾಗಿ ರಾಜಣ್ಣ ವಾಹನದ ಮೇಲೇರಿ ನಿಂತಿದ್ದರು. ದಿನ ಬೆಳಗಾದರೆ ಬೀದಿ ಬದಿಯ ಹೋರಾಟ ನಡೆಸುತ್ತ ಹೋರಾಟಗಳಲ್ಲಿ ಪೆಟ್ಟು ತಿನ್ನುತ್ತ ಪೆಟ್ಟು ಮಾಯುವ ಮುಂಚೆ ಮತ್ತೊಂದು ಹೋರಾಟ ಕಟ್ಟುತ್ತ ಸಾಗುವ ನಾಯಕರು ಇತರರಂತೆ ರಾಜಣ್ಣನೊಂದಿಗೆ ವಾಹನದ ಮೇಲೇರದೆ ಕಾಲ್ನಡಿಗೆಯಲ್ಲಿಯೇ ಉಳಿದಿದ್ದರು.

ಇವತ್ತಿನ ಮೆರವಣಿಗೆಯ ಘೋಷಣೆಗಳನ್ನು ಕೇಳುತ್ತಿದ್ದರೆ ನಾಯಕರಿಗೆ ಜೀವ ಕುಣಿಯುತ್ತದೆ. ಅವರಿಗೆ ತುಂಬ ಪ್ರಿಯವಾದ ಘೋಷಣೆಗಳವು. ಅವರು ಕೆಲವು ವರ್ಷಗಳಿಂದ ಯಾವ ರ್‍ಯಾಲಿಗೂ ಮೆರವಣಿಗೆಗೂ ಹೋಗುತ್ತಿಲ್ಲ. ಅವರನ್ನು ಈಗ ಯಾರೂ ಯಾವುದಕ್ಕೂ ಕರೆಯುವುದಿಲ್ಲ. ಕೆಲವೇ ವರ್ಷಗಳ ಹಿಂದೆ ಅಂದಾನಪ್ಪ ನಾಗರಾಜ ನಾಯಕರೆಂದರೆ ನಾಡಿನುದ್ದಕ್ಕೂ ಚಿರಪರಿಚಿತವಾದ ಹೆಸರು. ಮುಖ್ಯಮಂತ್ರಿಯ ಮನೆಗೆ ನೇರ ಪ್ರವೇಶ ಪಡೆಯುತ್ತಿದ್ದವನು ಎಷ್ಟು ಬೇಗ ಅಪ್ರಸ್ತುತವಾಗಿಬಿಟ್ಟೆ, ಅದೆಷ್ಟು ಬೇಗ ಅಜ್ಞಾತವಾಸಕ್ಕೆ ಸರಿದುಬಿಟ್ಟೆ ಎನ್ನುವ ಯೋಚನೆಯಿಂದ ನಾಯಕರಿಗೆ ದಿಗ್ಭ್ರಮೆಯಾಗುತ್ತದೆ. ನಾಯಕರ ಶಿಷ್ಯರು ಅವರನ್ನು 'ಹುಲಿ ಹುಲಿ ಕಣಣ್ಣಾ ನೀನು' ಅನ್ನುತ್ತಿದ್ದರು. ಒಟ್ಟಿನಲ್ಲಿ ದೈಹಿಕವಾಗಿ ಹುಲಿಯಂತೆ ದಿಟ್ಟವಾಗಿದ್ದ ನಾಯಕರು ತಮ್ಮ ಸುಡು ಬೆಂಕಿಯಂತಹ ಪ್ರಾಮಾಣಿಕತೆಯಿಂದಲೂ ಹುಲಿಯೆಂದೇ ಪ್ರಖ್ಯಾತರಾಗಿದ್ದರು. ಆದರೆ ಹುಲಿಗೆ ಈಗ ವಯಸ್ಸಾಗಿದೆ. ಅದರ ಹಲ್ಲು, ಉಗುರು ಕೂಡ ಮೊಂಡಾಗಿವೆ. ಈಗ ಅದೇನಾದರೂ ಗರ್ಜಿಸಿದರೆ ಯಾವುದೋ ಮುದಿ ಬೆಕ್ಕಿನ ಹತಾಶ ಗುಟುರಿನಂತೆ ಕೇಳುತ್ತದೆ. ಅದು ಅರ್ಥವಾಗಿ ಹುಲಿ ಕೂಡ ಸುಮ್ಮನಾಗಿದೆ. ಆದರೂ ಅದಕ್ಕೆ ತನ್ನ ಹಳೆಯ ಸಾಹಸಗಳ ನೆನಪಿನಿಂದ ಮನಸ್ಸು ಮುದಗೊಳ್ಳುವುದರಿಂದ ಅವುಗಳನ್ನು ಮೆಲುಕು ಹಾಕುತ್ತ ಸುಖಿಸುತ್ತಿರುತ್ತದೆ.

ಮೆರವಣಿಗೆಯಲ್ಲಿ ಎಲ್ಲರ ಕೈಯಲ್ಲಿ ಕೆಂಪು ಹಳದಿ ಬಣ್ಣದ ಬಾವುಟಗಳಿದ್ದವು. ಕೆಲವರ ಹೆಗಲ ಮೇಲೆ ಬಾವುಟದ್ದೇ ಬಣ್ಣದ ಶಾಲು ಕೂಡ ಇತ್ತು. ಅವರನ್ನು ನೋಡುತ್ತಿದ್ದರೆ ನಾಯಕರಿಗೆ ತಾನು ಮೊದಲು ಬಾವುಟ ಹಿಡಿದು ಸಂಭ್ರಮಿಸಿದ ದಿನದ ನೆನಪಾಯಿತು. ಬಾವುಟ ಹಿಡಿದ ಪ್ರತಿಸಲವೂ ಯೋಧನಂತೆ ಎದೆ ಸೆಟೆಸಿ ನಡೆಯುತ್ತಿದ್ದೆ ಎನ್ನುವುದು ಕೂಡ ನೆನಪಾಯಿತು. ಈಗಲೂ ಮೆರವಣಿಗೆಯಲ್ಲಿ ಹರೆಯದ ಹುಡುಗರಿದ್ದಾರೆ ಅದೇ ಬಣ್ಣದ ಬಾವುಟ ಶಾಲು ಎಲ್ಲವೂ ಇದೆ. ಆದರೆ ಮೆರವಣಿಗೆಯ ಸ್ವರೂಪ ಮಾತ್ರ ಮೊದಲಿನಂತಿಲ್ಲ ಎನ್ನಿಸಿತು ನಾಯಕರಿಗೆ.